CC No.677/2023
CW-5  PW-4

**ಪ್ರಧಾನ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಸೊರಬ**

**ಸಿ ಸಿ ನಂ. 677/2023**

**ಹೆಸರು** :- **ಸಂಜಯ್**

**ತಂದೆಯ ಹೆಸರು** :- **ರಂಗಪ್ಪ**

**ವಯಸ್ಸು** :- **23 ವರ್ಷ**

**ಉದ್ಯೋಗ** :- **ಖಾಸಗಿ ಕೆಲಸ**

**ಸ್ಥಳ** :- **ಓಟೂರು**

**ದಿನಾಂಕಃ 13.07.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ಚಾಸಾ-1 ನನ್ನ ಅಣ್ಣ. ಚಾಸಾ-4 ನನ್ನ ತಾಯಿ. ಚಾಸಾ-6 ನನ್ನ ತಮ್ಮ. ಚಾಸಾ-7 ನನ್ನ ಚಿಕ್ಕಪ್ಪನ ಮಗಳು. ಚಾಸಾ-8 ನಮ್ಮ ಪಕ್ಕದ ಮನೆಯವರು. ಚಾಸಾ-9 ನನ್ನ ಚಿಕ್ಕಮ್ಮ. ಚಾಸಾ-10 ನನ್ನ ಚಿಕ್ಕಮ್ಮ. ದಿಃ 21.06.2022 ರಂದು ನಾನು ಮತ್ತು ಚಾಸಾ-1, 6 ಮತ್ತು 7 ರವರು ಮನೆಯಲ್ಲಿ ಓದುತ್ತಿರುವಾಗ, ಆರೋಪಿತರು ನಮ್ಮ ಮೇಲೆ ಗಲಾಟೆಗೆ ಬಂದು, ನಮ್ಮ ಮನೆಯ ಮೇಲೆ ಕಲ್ಲುಗಳನ್ನು ಎಸೆದು, ಬೋಳಿಮಗನೇ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ಆರೋಪಿತರು ನನ್ನ ತಂದೆ ಮತ್ತು ಚಿಕ್ಕಪ್ಪ ಮನೆಯಲ್ಲಿದ್ದಾರೆಂದು ತಿಳಿದು ಹೊರಗೆ ಬನ್ನಿ ಎಂದು ಅವಾಚ್ಯ ಶಬ್ದಗಳಿಂದ ಬೈದು, ನಮ್ಮ ಮನೆಯ ಬಾಗಿಲನ್ನು ತೆಗೆದು ಒಳಗೆ ಬಂದಿರುತ್ತಾರೆ. ಆಗ ಚಾಸಾ-1 ಮತ್ತು 6 ರವರನ್ನು

ಹೊಡೆಯುತ್ತಿದ್ದಾಗ ಚಾಸಾ-2 ಮತ್ತು 7 ರವರು ಕೂಗಿಕೊಂಡಿರುತ್ತಾರೆ. ಚಾಸಾ-7 ರವರನ್ನು ಆರೋಪಿತರು ಹೊರಗಡೆ ಎಳೆದುಕೊಂಡು ಹೋಗಿರುತ್ತಾರೆ. ಆರೋಪಿತರು ಚಾಸಾ-6 ರವರನ್ನು ಸಹ ಹಿಡಿದುಕೊಂಡು, ಚಾಸಾ-9 ಮತ್ತು 10 ರವರನ್ನು ಸಹ ಹಿಡಿದು ಎಳೆದಾಡಿ ಹೊಡೆದಿರುತ್ತಾರೆ. ಆಗ 12 ನೇ ಆರೋಪಿಯು ಇವರನ್ನೆಲ್ಲ ಹೊಡಿಯಿರಿ ಅವರು ಬರುತ್ತಾರೆ ಎಂದು ಹೇಳಿರುತ್ತಾರೆ. 6 ನೇ ಆರೋಪಿಯು ತೆಂಗಿನ ಹ್ಯಾಡದಿಂದ ಹೊಡೆಯುತ್ತಿದ್ದು, ದೊಣ್ಣೆಗಳಿಂದ ಮನೆ ಮುಂದೆ ಹೊಡೆಯುತ್ತಿದ್ದು, ಮನೆಯ ಮುಂದಿನ ಬೈಕ್ ನ ಡೂಂ ನ್ನು ಹೊಡಿದಿರುತ್ತಾರೆ. ನಾನು ಚಾಸಾ-1, 4, 7, 8, 9 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆಗೆ ದಾಖಲಿಸಿರುತ್ತೇನೆ. ನಾನು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ. ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಗುರುತಿಸಿರುತ್ತೇನೆ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯು ಅಭಿಯೋಜನಾ ಪ್ರಕರಣಕ್ಕೆ ಭಾಗಶಃ ಪ್ರತಿಕೂಲ ಸಾಕ್ಷಿ ನುಡಿದ ಕಾರಣ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿ ಸವಾಲಿಗೆ ಅನುಮತಿ ಕೋರಿದ್ದು, ಸಾಕ್ಷಿಯು ಅಭಿಯೋಜನಾ ಪ್ರಕರಣಕ್ಕೆ ವ್ಯತಿರಿಕ್ತವಾಗಿ ಸಾಕ್ಷಿ ನುಡಿದ ಕಾರಣ ಪಾಟಿ ಸವಾಲಿಗೆ ಅನುಮತಿ ನೀಡಲಾಯಿತು).**

**ಪಾಟಿ ಸವಾಲುಃ ಮಾನ್ಯ ಸ.ಸ. ಅಭಿಯೋಜಕವರಿಂದಃ**

ಕಲ್ಲಪ್ಪ, ಶಶಾಂಕ, ಓಂಕಾರಪ್ಪ, ಶರತ್, ಪರಸಪ್ಪ, ಸುಧಾ, ನೀಲಮ್ಮ, ಚಂದ್ರಪ್ಪ, ಸಂತೋಷ ಇವರು ಆ ದಿನ ಗಲಾಟೆಯಲ್ಲಿ ಇರಲಿಲ್ಲ ಅಂದರೆ ಸಾಕ್ಷಿಯು ಹೊರಗಡೆ ಇರುತ್ತಾರೆ ಎಂದು ಉತ್ತರಿಸುತ್ತಾರೆ. ನಾನು ಕಲ್ಲು ದೊಣ್ಣೆಗಳಿಂದ ಹಲ್ಲೆ ಮಾಡಿರುತ್ತಾರೆ

ಎಂದು ಹೇಳಿರುತ್ತೇನೆ ಅಂದರೆ ಸರಿ.

**ಪಾಟಿ ಸವಾಲುಃ ಆರೋಪಿ ಪರ ಶ್ರೀ. ಪಿ.ಎಸ್.ಕೆ. ವಕೀಲರಿಂದಃ**

ನನ್ನ ಪದವಿಯು 2023 ರಲ್ಲಿ ಮುಗಿದಿರುತ್ತದೆ. ಆರೋಪಿತರ ಹಲ್ಲೆಯಿಂದ ನಮ್ಮ ಮನೆಯ ಮುಂದೆ ಇರುವ ದ್ವಿಚಕ್ರ ವಾಹನವು ಹಾನಿಯಾಗಿರುತ್ತದೆ. ಸದರಿ ದ್ವಿ ಚಕ್ರ ವಾಹನವನ್ನು ನಾವೆ ಹಾನಿಮಾಡಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಆರೋಪಿತರು ನಾನು ಹೇಳಿದ ದಿನ ದೊಣ್ಣೆಯಿಂದ ಹಲ್ಲೆ ಮಾಡಿರುವುದಾಗಲಿ, ಅವಾಚ್ಯ ಶಬ್ದಗಳಿಂದ ಬೈದಿರುವುದಾಗಲಿ ಮಾಡಿರುವುದಿಲ್ಲ ಅಂದರೆ ಸರಿಯಲ್ಲ. ಈ ಪ್ರಕರಣದ ಪಿರ್ಯಾದಿಯು ನಮ್ಮ ಕುಟುಂಬದವರು ಆಗಿರುವುದರಿಂದ ಅವರಿಗೆ ಅನುಕೂಲವಾಗಲೆಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಮ್ಮ ಕುಟುಂಬದವರು ಮದ್ಯಾಹ್ನ 3.30 ರ ಸಮಯದಲ್ಲಿ ಆರೋಪಿತರ ಕುಟುಂಬದವರ ಮೇಲೆ ಹಲ್ಲೆ ಮಾಡಿರುತ್ತಾರೆ ಅಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

**(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಕಂಪ್ಯೂಟರೀಕರಿಸಲಾಯ್ತು).**

**ಓ.ಹೇ.ಕೇ. ಸರಿ ಇದೆ ಎಂದು ಒಪ್ಪಿದ್ದಾರೆ.**

**ಪ್ರಧಾನ ವ್ಯವಹಾರ ನ್ಯಾ ಮತ್ತು ಜೆ.ಎಂ.ಎಫ್.ಸಿ**
**ಸೊರಬ.**